ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಸಿ.ಸಿ.ನಂಃ 2390/25**

ಪಿಡಬ್ಲ್ಯುಃ – 2

ಸಿಡಬ್ಲ್ಯುಃ – 1

ದಿನಾಂಕಃ 02.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಗಣೇಶ್ |
| ತಂದೆಯ ಹೆಸರು | – ಜಿ ಕೆ ರಾಜು |
| ವಯಸ್ಸು | – 59 ವರ್ಷ |
| ವೃತ್ತಿ | – ಅಬಕಾರಿ ಉಪ ನಿರೀಕ್ಷಕರು, ಮಡಿಕೇರಿ ವಲಯ |
| ವಾಸಸ್ಥಳ | – ಮಡಿಕೇರಿ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ನಾನು ಸೆಪ್ಟೆಂಬರ್ –2023 ರಿಂದ ಇಲ್ಲಿಯವರೆಗೆ ಅಬಕಾರಿ ಉಪ ನಿರೀಕ್ಷಕನಾಗಿ ಮಡಿಕೇರಿ ವಲಯ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 22.04.2025 ರಂದು ಮಡಿಕೇರಿ ತಾಲ್ಲೂಕು ಸಂಪಾಜೆ ಹೋಬಳಿ ವ್ಯಾಪ್ತಿಯಲ್ಲಿ ನಾನು ಮತ್ತು ನನ್ನ ಸಿಬ್ಬಂದಿಯವರಾದ ಚಾಸಾ–2 ಗಸ್ತಿನಲ್ಲಿದ್ದಾಗ ಬೆಃ 6.00 ಗಂಟೆಗೆ ಚೆಂಬು ಗ್ರಾಮದಲ್ಲಿ ನಿಡಂಜಿ ಪುರುಷೋತ್ತಮ ಎನ್ನುವ ವ್ಯ ಕ್ತಿ ಅಕ್ರಮವಾಗಿ ಕಳ್ಳಬಟ್ಟಿ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿಯ ಮೇರೆಗೆ, ನಾನು ಹಾಗೂ ಚಾಸಾ–2 ರವರು ಕಾರ್ಯ ಪ್ರವೃತ್ತರಾಗಿ ಸದರಿ ವ್ಯಕ್ತಿಯ ಮನೆಯ ಬಳಿ ಹೋಗಿ ಅಲ್ಲಿ ಆಸಾಮಿ(ಆರೋಪಿ) ಇದ್ದು, ಆರೋಪಿಯ ಹೆಸರು ವಿಳಾಸ ವಿಚಾರಿಸಿ, ನಂತರ ನಾವು ಬಂದ ವಿಚಾರವನ್ನು ತಿಳಿಸಿರುತ್ತೇವೆ. ಆ ಸಮಯದಲ್ಲಿ ನ್ಯಾಯಾಲಯದಿಂದ ಶೋಧನಾ ಸಮುಚ್ಚಿತ್ತ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲದ ಕಾರಣ ಹಾಗೂ ಸಾಕ್ಷ್ಯ ನಾಶ ಆಗಬಹುದು ಎನ್ನುವ ಕಾರಣದಿಂದ ಅಬಕಾರಿ ಕಾಯ್ದೆ ಕಲಂ 54 ಕಲಂ 65

ರಡಿಯಲ್ಲಿ ಸ್ಥಳದಲ್ಲೇ ಶೋಧನಾ ವಾರೆಂಟ್ ತಯಾರಿಸಿ, ಪರಸ್ಪರ ಅಂಗಶೋಧನೆ ಮಾಡಿಕೊಂಡು ಆರೋಪಿ ಮನೆಯ ಒಳಗೆ ಹೋಗಿ ಶೋಧನೆ ಮಾಡಿದೆವು. ಶೋಧನೆ ಮಾಡಲಾಗಿ ಆರೋಪಿಯ ಮನೆಯ ಎಡ ಭಾಗದಲ್ಲಿ ಕೊಟ್ಟಿಗೆಯಂತಿರುವ ಅಡುಗೆ ಮನೆ ಇರುತ್ತದೆ. ಸದರಿ ಅಡುಗೆ ಮನೆಗೆ ಉತ್ತರ ದಿಕ್ಕಿನಿಂದ ಪ್ರವೇಶಿಸಿ, ಅಡುಗೆ ಮನೆಯ ದಕ್ಷಿಣ ದಿಕ್ಕಿನ ಎಡ ಭಾಗದಲ್ಲಿ ಸುಮಾರು 20 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಕ್ಯಾನ್ ಕಂಡು ಬಂದಿದ್ದು, ಅದನ್ನು ಹೋಗಿ ನೋಡಲಾಗಿ ಅದರಲ್ಲಿ ಸುಮಾರು 12 ಲೀಟರ್ ಕಳ್ಳಬಟ್ಟಿ ಸಾರಾಯಿ ಇದ್ದುದು ಕಂಡು ಬಂತು. ಸದರಿ ಪ್ಲಾಸ್ಟಿಕ್ ಕ್ಯಾನ್ ನ ಪಕ್ಕದಲ್ಲಿ 10 ಲೀ ಸಾಮರ್ಥ್ಯ ದ ಪ್ಲಾಸ್ಟಿಕ್ ಕ್ಯಾನ್ ಕಂಡು ಬಂದಿದ್ದು, ಅದನ್ನು ಹೋಗಿ ನೋಡಲಾಗಿ ಅದರಲ್ಲಿ ಸುಮಾರು 2 ಲೀಟರ್ ಕಳ್ಳಬಟ್ಟಿ ಸಾರಾಯಿ ಇದ್ದುದು ಕಂಡು ಬಂತು. ದೊರೆತ ಮದ್ಯವನ್ನು ಇಲಾಖಾ ವಶಕ್ಕೆ ಪಡೆದು, ಸದರಿ ಕ್ಯಾನ್ ಗಳ ಮೇಲೆ ಆರೋಪಿಯ ಹೆಸರು, ವಿಳಾಸ, ವಿವರಗಳನ್ನು ಅಂಟಿಸಲಾಯಿತು. ದೊರೆತ ಕಳ್ಳಬಟ್ಟಿ ಸಾರಾಯಿ ಪೈಕಿ ತಲಾ 750 ಎಂ ಎಲ್ ಅನ್ನು ರಾಸಾಯನಿಕ ಪರೀಕ್ಷೆಗೆಂದು ಮಾದರಿಗೆ ತೆಗೆಯಲಾಯಿತು. ದೊರೆತ ಮದ್ಯ ಹಾಗೂ ಆರೋಪಿಯನ್ನು ವಶಕ್ಕೆ ಪಡೆದು ದಸ್ತಗಿರಿ ಕ್ರಮ ಜರುಗಿಸಲಾಯಿತು. ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿ ಮೇಲೆ ಹೇಳಿದ ಸದರಿ ಕಳ್ಳಬಟ್ಟಿ ಸಾರಾಯಿಯನ್ನು ಅಮಾನತ್ತು ಮಾಡಿಕೊಂಡೆವು. ಅಮಾನತ್ತು ಮಹಜರಿಗೆ ನಾನು ಮತ್ತು ಚಾಸಾ-2 ಸಹಿ ಮಾಡಿರುತ್ತೇವೆ. ರಾಸಾಯನಿಕ ಪರೀಕ್ಷೆಗೆ ತೆಗೆದ ಮದ್ಯವನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ಅದನ್ನು ನೋಡಿಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂಒ-1 ಮತ್ತು 2 ಎಂದು ಗುರುತಿಸಲಾಗಿದೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಅಮಾನತ್ತು ಪಂಚನಾಮೆಯಾಗಿದ್ದು, ಈಗಾಗಲೇ ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಶೋಧನಾ ಸಮುಚ್ಚಿತ ವಾರೆಂಟನ್ನು ಆಗಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು

ಮಾದರಿ ಮೊಹರಾಗಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ಮಹಜರು ಕಾಲಕ್ಕೆ ಫೊಟೊ ತೆಗೆದಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಗಿದೆ. ಠಾಣೆಗೆ ಹಾಜರಾಗಿ ನಾನೇ ಸ್ವತಃ ಆರೋಪಿಯ ಪ್ರ. ವ. ವರದಿಯನ್ನು ದಾಖಲಿಸಿರುತ್ತೇನೆ. ಸದರಿ ಪ್ರ. ವ . ವರದಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ – ಆರೋಪಿ ಪರ ವಕೀಲರಾದ ಶ್ರೀ. ಬಿ ಡಿ ಕೆ ರವರಿಂದಃ–

ಸದರಿ ದಿನದಂದು ಗಸ್ತು ಕಾರ್ಯಕ್ಕೆ ಎಂದು ಬೆಳಗ್ಗೆ 5.00 ಗಂಟೆಗೆ ಮಡಿಕೇರಿಯಿಂದ ಹೊರಟಿರುತ್ತೇವೆ. ಅದೇ ದಿನ ಬೆಳಗ್ಗೆ 6.40 ಗಂಟೆಗೆ ಖಚಿತ ಮಾಹಿತಿ ದೊರೆತಿರುತ್ತದೆ. ಸದರಿ ದಿನದಂದು ನಾವು ಸಂಪಾಜೆಯಲ್ಲಿನ ಔಟ್ ಪೋಸ್ಟ್‌ನ ಗಸ್ತು ಕಾರ್ಯಕ್ಕೆ ಹೋಗುತ್ತಿದ್ದೆವು. ಆ ದಿನ ನಾವು ಗಸ್ತು ಕಾರ್ಯಕ್ಕೆ ಹೋಗಿರುವ ವಿವರವನ್ನು ಇಲಾಖಾ ಪುಸ್ತಕದಲ್ಲಿ ನಮೂದು ಮಾಡಿರುತ್ತೇವೆ ಎಂದರೆ ಸರಿ. ಖಚಿತ ಮಾಹಿತಿ ಬರುವ ಕಾಲಕ್ಕೆ ನಾವು ಸಂಪಾಜೆಯ ಅರಣ್ಯಾ ತನಿಖಾ ಠಾಣೆಯ ಬಳಿ ಇದ್ದೆವು. ಖಚಿತ ಮಾಹಿತಿಯು ನನ್ನ ವೈಯಕ್ತಿಕ ಮೊಬೈಲ್ ಗೆ ಬಂದಿರುತ್ತದೆ. ಖಚಿತ ಮಾಹಿತಿಯಲ್ಲಿ ಒಂದು ಹಂಚಿನ ಮನೆ, ತೋಟ ಎಂದು ಮಾಹಿತಿ ಇತ್ತು. ಸಂಪಾಜೆಯ ಅರಣ್ಯ ತನಿಖಾ ಠಾಣೆಯಿಂದ ಆರೋಪಿಯ ಮನೆಯವರೆಗೂ ಸುಮಾರು 5 ಹಂಚಿನ ಮನೆ ಇತ್ತು. ನಮಗೆ ಯಾರೂ ಆರೋಪಿ ಮನೆಯನ್ನು ತೋರಿಸಿಲ್ಲ. ಘಟನಾ ದಿನವನ್ನು ಹೊರತು ಪಡಿಸಿ ಹಿಂದೆ ನಾವೆಂದೂ ಆರೋಪಿಯ ಮನೆಗೆ ಹೋಗಿರಲಿಲ್ಲ. ಆರೋಪಿಯ ಮನೆಯ ರಸ್ತೆಯ ಬಗ್ಗೆ ಹಿಂದೆ ನಮಗೆ ಗೊತ್ತಿರಲಿಲ್ಲ ಎಂದರೆ ಸರಿ. ಆರೋಪಿಯ ಮನೆಯಲ್ಲಿ ಮೊಬೈಲ್ ನೆಟ್ ವರ್ಕ್ ಸಿಕ್ಕುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಗಸ್ತು ಕಾರ್ಯಕ್ಕೆ ಹೋಗುವಾಗ ಇಲಾಖೆಯಿಂದ ನೀಡಿದ ಮೊಬೈಲ್, ಗಸ್ತು

ಕಿಟ್ ಮತ್ತು ಕ್ಯಾಮರಾ ತೆಗೆದುಕೊಂಡು ಹೋಗುತ್ತವೇವೆ ಎಂದರೆ ಸರಿ. ನಿಪಿ-4 ಫೋಟೋವನ್ನು ನೀವು ಇಲಾಖಾ ಕ್ಯಾಮರಾದಲ್ಲಿ ಏಕೆ ತೆಗೆದಿಲ್ಲ ಮೊಬೈಲ್ ನಲ್ಲಿ ಏಕೆ ತೆಗೆದಿದ್ದೀರಿ ಎಂದರೆ ಸಾಕ್ಷಿಯು ಇಲಾಖಾ ಕ್ಯಾಮರಾ ದುರಸ್ಥಿಯಲ್ಲಿ ಇತ್ತು ಆದ್ದರಿಂದ ಮೊಬೈಲ್ ನಿಂದ ತೆಗೆದಿದ್ದೇವೆ. ನಿಪಿ-3 ರಲ್ಲಿ ಮೊಕದ್ದಮೆ ಸಂಖ್ಯೆಯನ್ನು ಮೊದಲೇ ಹೇಗೆ ನಮೂದಿಸಿದ್ದೀರಿ ಎಂದರೆ ಸಾಕ್ಷಿಯು ನನಗೆ ಹಿಂದೆ ಆಗಿದ್ದ ಮೊಕದ್ದಮೆ ಸಂಖ್ಯೆ ಗೊತ್ತಿದ್ದುದರಿಂದ ಅದರ ಮುಂದಿನ ಸಂಖೆಯನ್ನು ನಿಪಿ-3 ರಲ್ಲಿ ನಾನೇ ನಮೂಾದಿಸಿರುತ್ತೇನೆ. ಇಲಾಖಾ ಜೀಪಿನಲ್ಲಿ ನಾವು ಆರೋಪಿಯ ಮನೆಗೆ ಹೋಗಿರುತ್ತೇವೆ, ಆ ದಿನ ನಾವು ಮಫ್ತಿಯಲ್ಲಿ ಇದ್ದೆವು. ಖಚಿತ ಮಾಹಿತಿಯಲ್ಲಿ ಆರೋಪಿ ಮನೆಯ ವಿಳಾಸವನ್ನು ಹೇಳಿದ್ದರಿಂದ ನಾವು ನೇರವಾಗಿ ಆರೋಪಿ ಮನೆಗೆ ಹೋಗಿರುತ್ತೇವೆ. ಆರೋಪಿ ಮನೆ ಇರುವ ಊರು ಗಡಿ ಗುರುತು ಇಲ್ಲದ ಕುಗ್ರಾಮ ಆಗಿದೆ ಎಂದರೆ ಸರಿ. ಆರೋಪಿಯ ಅಣ್ಣನ ವಿರುದ್ದ ಕೂಡ ನಾವು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿ. ಆ ಪ್ರಕರಣವನ್ನು ನಾನು ದಾಖಲು ಮಾಡಿಲ್ಲ, ನಮ್ಮ ಇಲಾಖೆಯ ಮತ್ತೊಂದು ತಂಡ ದಾಖಲು ಮಾಡಿದೆ ಎಂದರೆ ಸರಿ. ಘಟನಾ ದಿನದಂದು ನಾವು ಬೇರೆ ತಂಡದಲ್ಲಿ ಗಸ್ತು ಹೋಗಿದ್ದೆವು, ಮತ್ತೊಂದು ತಂಡ ಬೇರೆ ಕಡೆ ಗಸ್ತಿಗೆ ಹೋಗಿತ್ತು. ದಿಃ 22.04.2025 ರಂದೇ ಅದೇ ಸಮಯದಲ್ಲಿ ಆರೋಪಿ ಅಣ್ಣನ ವಿರುದ್ದ ಕೂಡ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಅದೇ ದಿನ ಆಗಿದೆ ಆದರೆ ಸಮಯ ಬೇರೆ. ಆರೋಪಿಯ ಮನೆಯ ಮುಂದೆ ನಮ್ಮ ಇಲಾಖಾ ವಾಹನ ಹೋಗಿರುತ್ತದೆ. ನಿಮ್ಮ ಇಲಾಖಾ ವಾಹನವನ್ನು ನೋಡಿ ಆರೋಪಿ ಓಡಿ ಹೋಗಲು ಪ್ರಯತ್ನ ಪಟ್ಟನಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆರೋಪಿ ಮನೆಯಲ್ಲಿ 4 ರೂಮುಗಳು ಇವೆ. ಘಟನಾ ದಿನದಂದು ಆರೋಪಿ ಒಬ್ಬನೇ ಅವನ ಮನೆಯಲ್ಲಿ ಇದ್ದ. ನಿಪಿ-1 ಮಹಜರಿಗೆ ಚಾಸಾ-2 ಕೂಡ ಸಹಿ ಮಾಡಿದ್ದಾರೆ. ಘಟನಾ ದಿನದಂದು ನಾವು ಆರೋಪಿಯ ಮನೆಗೆ ಹೋಗಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ದಾಖಲೆಯನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮನೆಯಲ್ಲಿ ನಾವು ಯಾವುದೇ ಕಳ್ಳಬಟ್ಟಿ ಸಾರಾಯಿಯನ್ನು ಅಮಾನತ್ತು ಮಾಡಿಲ್ಲ, ಮು. ಮಾ. 1 ಮತ್ತು 2 ನ್ನು ಅಮಾನತ್ತು ಮಾಡಿಕೊಂಡಿಲ್ಲ, ನಮ್ಮ ಕಚೇರಿಯಲ್ಲಿ ಬೇರೊಂದು ಪ್ರಕರಣದಲ್ಲಿದ್ದ ಮದ್ಯವನ್ನು ಮು. ಮಾ. 1 ಮತ್ತು 2 ರಂತೆ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣ ಸುಳ್ಳು ಪ್ರಕರಣ ಆಗಿರುವುದರಿಂದ ನಾವು ದಾಳಿಯನ್ನು ಕ್ರಮಬದ್ಧವಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಕ್ಕೋಸ್ಕರ

ಮತ್ತು ಮೇಲಾಧಿಕಾರಿಗಳ ಒತ್ತಡದಿಂದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.